ಶ್ರೀ ಡಿ. ನಾರಾಯಣ ದಾಸ್ : ಮಾನ್ಯ ಆರೋಗ್ಯ ಮಂತ್ರಿಗಳಿಗೆ ಆರೋಗ್ಯ ಸರಿ ಇಲ್ಲವೆ, ಏನಿದು? ಇದು ಬಹಳ ಕೆಟ್ಟ ಸಂಪ್ರದಾಯ. ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಮಂತ್ರಿಗಳು ಇಲ್ಲವೆಂದರೆ ಏನು ಅರ್ಥ?

ಶ್ರೀ ವಿ. ಮುನಿಯಪ್ಪ : ಪ್ರಶ್ನೆ ಇದ್ದು ಮಂತ್ರಿಗಳು ಬಂದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಏನು ವಿಚಾರ ಎಂದು ತಿಳಿದುಕೊಂಡು ಆಮೇಲೆ ನಾನು ನಿಮಗೆ ತಿಳಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಆರೋಗ್ಯ ಮಂತ್ರಿಗಳು ಅಂದಾಕ್ಷಣ ಯಾವಾಗಲೂ ಆರೋಗ್ಯವಾಗಿರುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಅವರು ಇರುವಂಥ ಪರಿಸರ ಅಂಥದ್ದು.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಆರೋಗ್ಯ ಸರಿಯಿಲ್ಲವೆಂದರೆ ತಿಳಿಸಿ ಹೋಗಬೇಕಲ್ಲ. ಜವಾಬ್ದಾರಿ ಇರತಕ್ಕ ಮಂತ್ರಿಗಳು ಆರೋಗ್ಯ ಸರಿಯಿಲ್ಲದಿದ್ದರೆ ಅಧ್ಯಕ್ಷರಿಗೆ ತಿಳಿಸಿ ಅನುಮತಿ ಪಡೆದುಕೊಂಡು ಹೋಗಬೇಕು.

ಒಬ್ಬ ಮಾನ್ಯ ಸದಸ್ಯರು : ಆರೋಗ್ಯ ಮಂತ್ರಿಗಳು ನಾಳೆ ಉತ್ತರ ಕೊಡುತ್ತಾರೆಂದು ಸಭಾಧ್ಯಕ್ಷರು ಹೇಳಿದ್ದಾರಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಜಾಪುರ ಜಿಲ್ಲೆಯಲ್ಲಿ ಹಿಂದಿ ಶಿಕ್ಷಕರ ನೇಮಕಾತಿ.

378 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಇರುವ ಹಿಂದಿ ಶಿಕ್ಷಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಒಟ್ಟು ಹಿಂದಿ ಶಿಕ್ಷಕರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು)

ಇ) ಈ ಖಾಲಿ ಸ್ಥಾನಗಳನ್ನು ಯಾವಾಗ ತುಂಬಲಾಗುವುದು? ಭರ್ತಿ ಮಾಡಲು ಅನುಸರಿಸುತ್ತಿರುವ ನಿಯಮಗಳೇನು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಮಧ್ಯಮ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಾಲೆಗಳು : 230

ಪ್ರೌಢ ಶಾಲೆಗಳು : 63

ವಿವರವನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.

ಅ) ಪ್ರಾಥಮಿಕ ಶಾಲೆಗಳು : 332

ಪ್ರೌಢ ಶಾಲೆಗಳು : 225

ವಿವರವನ್ನು ಅನುಬಂಧ- 2 ರಲ್ಲಿ ನೀಡಲಾಗಿದೆ.

ಇ) ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು 1995-96ನೇ ಸಾಲಿನಲ್ಲಿ ವಿಶೇಷ ನೇಮಕಾತಿ ಮತ್ತು ಸಾಮಾನ್ಯ ನೇಮಕಾತಿ ಮೂಲಕ ತುಂಬಲಾಗುವುದು. ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವ ಬಗ್ಗೆ ನಿಯಮಗಳನ್ನು ರೂಪಿಸಲಾಗುತ್ತಿದೆ.

ಅನುಬಂಧ - 1

ಬಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆ: ಪ್ರೌಢ ಶಾಲೆಯಲ್ಲಿರುವ ತಾಲ್ಲೂಕುವಾರು ಹಿಂದಿ ಶಿಕ್ಷಕರ ವಿವರ.

ತಾಲ್ಲೂಕುವಾರು	*ಪ್ರಾಥಮಿಕ ಶಾಲೆಗಳು*	*ಪ್ರೌಢ ಶಾಲೆಗಳು*
ಬಿಜಾಪುರ	19	04
ಬಿಜಾಪುರ ನಗರ	26	04
ಮುಧೋಳ್	18	05
ಬಿಳಗಿ	08	05
ಮುದ್ದೆಬಿಹಾಳ	18	05
ಬಾಗಲಕೋಟೆ	18	05
ಸಿಂಧಗಿ	20	06
ಇಂಡಿ	20	03
ಹುನಗುಂದ	24	12
ಜಮಖಂಡಿ	18	07
ಬಾದಾಮಿ	18	03
ಬಾಗೇವಾಡಿ	21	04
	320	**63**

ಅನುಬಂಧ - 2

ರಾಜ್ಯದಲ್ಲಿರುವ ಪ್ರಾಥಮಿಕ:ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹಿಂದಿ ಶಿಕ್ಷಕರ ವಿವರ

ಜಿಲ್ಲೆ	ಪ್ರಾಥಮಿಕ ಶಾಲೆಗಳು	ಪ್ರೌಢ ಶಾಲೆಗಳು
ಬೆಂಗಳೂರು ಉತ್ತರ ಜಿಲ್ಲೆ	-	-
ಬೆಂಗಳೂರು ಗ್ರಾಮಾಂತರ	24	03
ಕೋಲಾರ	-	10
ಚಿತ್ರದುರ್ಗ	-	15
ದಕ್ಷಿಣ ಕನ್ನಡ	17	11
ಚಿಕ್ಕಮಗಳೂರು	18	-
ಕೊಡಗು	16	03
ಬಿಜಾಪುರ	07	12
ಧಾರವಾಡ	88	30
ಬೀದರ್	01	05
ರಾಯಚೂರು	48	32
ಬೆಂಗಳೂರು ದಕ್ಷಿಣ	-	-
ತುಮಕೂರು	09	06
ಶಿವಮೊಗ್ಗ	13	06
ಮೈಸೂರು ಜಿಲ್ಲೆ	-	01
ಮಂಡ್ಯ	29	-
ಹಾಸನ	20	03
ಬೆಳಗಾಂ	28	22
ಕಾರವಾರ	-	12
ಗುಲ್ಬರ್ಗಾ	09	40
ಬಳ್ಳಾರಿ	05	14
	332	**225**

ಚುಕ್ಕೆ ಗುರುತಿನ ಪ್ರ.ಸಂ 2861ರ (ಅ) ಗೆ ಅನುಬಂಧ-2

ತಾಲ್ಲೂಕುವಾರು ವಿವರ ಪಟ್ಟಿ
ಖಾಲಿ ಇರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳ ವಿವರ

ತಾಲ್ಲೂಕುಗಳು	ಸರ್ಕಾರಿ ಪ್ರಾಥಮಿಕ ಶಾಲೆಗಳು ಬೋಧಕರ(ಭಾಷಾವಾರು)				ಸರ್ಕಾರಿ ಪ್ರೌಢ ಶಾಲೆಗಳು ಭಾಷಾವಾರು ಭೋಧಕರ ವಿವರ ಕಲಾ ಪದವೀಧರರು ವಿಜ್ಞಾನ ಪಿಸಿಎಂ					ವಿಜ್ಞಾನ ಸಿಪಿಜೆಡ್			ಭಾಷಾವಾರು ಶಿಕ್ಷಕರು		
	ಕನ್ನಡ	ಮರಾಠಿ	ಉರ್ದು	ಇಂಗ್ಲೀಷ್	ಕನ್ನಡ	ಮರಾಠಿ	ಉ.	ಕ.	ಮ.	ಉರ್ದು	ಕನ್ನಡ	ಮರಾಠಿ	ಉರ್ದು	ಕನ್ನಡ	ಹಿಂದಿ
1) ಔರಾದ್	19	05	01	—	08	04	—	02	03	—	01	03	—	06	—
2) ಬಸವಕಲ್ಯಾಣ	21	07	02	—	13	11	01	03	04	—	02	02	02	03	01
3) ಭಾಲ್ಕಿ	13	02	01	—	05	03	—	01	02	01	05	04	—	06	01
4) ಬೀದರ್	17	03	05	—	01	—	01	—	—	01	03	—	—	02	01
5) ಹುಮ್ನಾಬಾದ್	12	—	03	—	15	—	03	01	—	01	04	—	01	04	03
ಒಟ್ಟು	**82**	**17**	**12**	—	**52**	**18**	**05**	**07**	**09**	**03**	**15**	**09**	**03**	**20**	**06**

	ಬೋಧಕೇತರ ವಿವರ				ಶಿಕ್ಷಕರ ತರಬೇತಿ ಕೇಂದ್ರ
	ಪ್ರದಸ	ದ್ವಿದಸ	ಸಿಸಿಟಿ	ಸೇವಕ	
1) ಔರಾದ್	06	01	—	08	
2) ಬಸವನಕಲ್ಯಾಣ	06	02	—	12	
3) ಭಾಲ್ಕಿ	-	02	—	05	ಬೀದರ್ ಜಿಲ್ಲೆಯಲ್ಲಿ 2 ಸರ್ಕಾರಿ ಶಿಕ್ಷಕರ ತರಬೇತಿ
4) ಬೀದರ್	04	03	—	12	ಶಾಲೆಗಳಿದ್ದು ಇದರಲ್ಲಿ 1 ಡಯಟ್ ಇನ್ನೊಂದು
5) ಹುಮ್ನಾಬಾದ್	07	—	01	06	ಮರಾಠಿ ತರಬೇತಿ ಸಂಸ್ಥೆ. ಮರಾಠಿ ಟಿಟಿಐನಲ್ಲಿ
ಒಟ್ಟು	**23**	**08**	**01**	**43**	ಒಂದು ಗಣಿತದ ಹುದ್ದೆ ಖಾಲಿ ಇದೆ.